ಎಚ್ ಆರ್ ಸಿ 1/2018

ಪಿಡಬ್ಲ್ಯು - 1

ದಿನಾಂಕ 26-02-2021

ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃ ಎದುರುಗಾರ ಪರ ವಕೀಲರಾದ ಶ್ರೀ ಎಸ್ ವಿ ಪಿ ರವರಿಂದ

ಅರ್ಜಿ ಆಸ್ತಿಯ ಸಿ ಟಿ ಎಸ್ ನಂ.348/ಬಿ/1. ಬಿ ಆರ್ ಟಿ ಎಸ್ ಅಕ್ವೂಸೇಶನ್ ಕ್ಕಿಂತ ಮೊದಲು 12/11 ಇತ್ತು. ಅಕ್ವಿಸೇಶನ್ ಆದ ಮೇಲೆ 12/6 ಇದೆ ಎಂದು ಹೇಳುತ್ತಾರೆ. ಅರ್ಜಿಯ ವಿಸ್ತೀರ್ಣ ಉದ್ದ 10 ಹಾಗೂ ಅಗಲ 6 ಇದೆ. ಅಕ್ವಿಸೇಶನ್ ಆದ ಮೇಲೆ ಅಳತೆ ಮಾಡಿರುತ್ತೇವೆ. ಮೋಜನಿ ಆದ ಮೇಲೆ ಅದು 10X6 ಇದೆ. ಅಕ್ವಿಸೇಶನ್ ಆದ ಮೇಲೆ ಅರ್ಜಿಯ ಆಸ್ತಿಯು ಕಡಿಮೆ ಆಗುತ್ತಾ ಬಂದಿದೆ ಎಂದರೆ ಸರಿ , ಅದು ತ್ರೀಕೋಣಾಕಾರದಲ್ಲಿದೆ ಎಂದರೆ ಸರಿ. ಅದು ಉತ್ತರದಿಂದ ದಕ್ಷಿಣಕ್ಕೆ ಕಡಿಮೆ ಆಗುತ್ತಾ ಬಂದಿದೆ ಎಂದರೆ ಸರಿ. ಉತ್ತರಕ್ಕೆ ಇನ್ನೊಬ್ಬ ಬಾಡಿಗೇ ದಾರರು ಇರುತ್ತಾರೆ. ಅವರ ಹೆಸರು ಬಸವರಾಜ್. ದಕ್ಷಿಣಕ್ಕೆ ನಮ್ಮ ಆಸ್ತಿ ಇದೆ. ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ಬಿ ಆರ್ ಟಿ ಎಸ್ ರಸ್ತೆ ಇದೆ. ದಕ್ಷಿಣಕ್ಕೆ ನಮ್ಮ ಜಾಗ ಇದೆ. ಅದನ್ನು ನಾನು ಅಳತೆ ಮಾಡಿರುವುದಿಲ್ಲ. ಕುಲ್ಲಾ ಜಾಗೆಯ ಸಿಟಿಎಸ್ ನಂಬರ್ ಗೊತ್ತಿಲ್ಲ, ಎಕೆಂದರೆ ಅಳತೆ ಮಾಡಿಲ್ಲ. ಬಸವರಾಜ್ ಟೇಲರ್ ನಂತರ ಉತ್ತರದ ಕಡೆಗೆ ಹರೀಶ್ ಸಿಂಗ್ ಅವರು ಇದ್ದಾರೆ ಎಂದರೆ ಸಾಕ್ಷಿಯು ಅವರೂ ಸಹ ಬಾಡಿಗೆದಾರರು ಎಂದು ಹೇಳುತ್ತಾರೆ. ಅದರ ನಂತರ ಪತ್ತಾರರ ಎರಡು ಅಂಗಡಿಗಳು ಇವೆ ಎಂದರೆ ಸರಿ. ಮತ್ತೇ ಯಾವ ಅಂಗಡಿಗಳು ಇವೆ ಎಂದು ನನಗೆ ನೆನಪಿಲ್ಲ. ನಂತರ ಅಲ್ಲಿ ಶೆಟ್ಟಿ ಅವರ ಹೊಟೆಲ್ ಇದೆ ಎಂದರೆ ಸರಿ. ಶೆಟ್ಟಿ ಹೊಟೆಲ್ನ ಮೇಲ್ಮಹಡಿಯಲ್ಲಿ ಸೋನು ಜರಾಕ್ಸ ಅಂಗಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅದರ ಮುಂದೆ ಯಾವ ಅಂಗಡಿ ಇದೆ ಎಂದು ನನಗೆ ಗೊತ್ತಿಲ್ಲ.

ನಾವು ಬಾಡಿಗೆದಾರರನ್ನು ತೆಗೆಯಲು ಎಲ್ಲಾ ಬಾಡಿಗೆದಾರರಿಗೆ ಕೊಟ್ಟಿರುತ್ತೇವೆ, ಅವುಗಳಲ್ಲಿ ನಾಲ್ಕೈದು ಬಾಡಿಗೆದಾರರನ್ನು ತೆಗೆದಿರುತ್ತೇವೆ. ಅವರ ಹೆಸರು ಮುರುಡೇಶ್ವರ, ಗಣೇಶ್ ರಾವ್, ಹೊಸೂರು, ಶೀರೀ ಇನ್ನುಳಿದ ಇಬ್ಬರ ಹೆಸರು ನನಗೆ ನೆನಪಿಲ್ಲ. ಅವರನ್ನು ನ್ಯಾಯಾಲಯದ ಮೂಲಕ ತೆಗೆದಿರುತ್ತೇವೆ. ಎಚ್ ಆರ್ ಸಿ ಸಂಖ್ಯೆ ನನಗೆ ನೆನಪಿಲ್ಲ.

ಎಚ್ ಆರ್ ಸಿ 1/2018

ಪಿಡಬ್ಲ್ಯು – 1

ದಾಖಲಾತಿಗಳನ್ನು ನಮ್ಮ ವಕೀಲರು ಹಾಜರು ಪಡಿಸಿರುತ್ತಾರೆ. ನಾವು ಬಾಡಿಗೆದಾರರನ್ನು ಬಿಡಿಸಿದ ನಂತರ ಆ ಆಸ್ತಿಯ ಕಬ್ಜೆಯಲ್ಲಿದ್ದೇವೆ ಎಂದು ತೋರಿಸಲು ದಾಖಲೆಗಳು ಇವೆ.

ನಾವು ಅರ್ಜಿಯ ಆಸ್ತಿಯಲ್ಲಿ ಸಮುದಾಯ ಭವನವನ್ನು ಕಟ್ಟಿಸಲು ಇಚ್ಚಿಸಿದ್ದೇವೆ. ನಾವು ಯೋಜನೆಯ ಅನುಮತಿಗೊಸ್ಕರ ಮುನ್ಸಿಪಾಲಿಟಿಗೆ ಹೋಗಿದ್ದೆವು. ಅವರು ಎಲ್ಲಾ ಬಾಡಿಗೆದಾರರನ್ನು ಕಾಲಿ ಮಾಡಿಸುವವರೆಗೆ ಯೋಜನೆಗೆ ಅನುಮತಿ ನೀಡುವುದಿಲ್ಲ ಎಂದು ಹೇಳುತ್ತಾರೆ. ಕಾರ್ಪೋರೇಶನ್ ಅವರು ಬಂದು ನೋಡಿ ನಮಗೆ ಅನುಮತಿಯನ್ನು ನಿರಾಕರಿಸಿರುತ್ತಾರೆ. ಸಮುದಾಯ ಭವನ ಕಟ್ಟಲು ಕಟ್ಟಡದ ವೆಚ್ಚ ಅಂದಾಜು 50 ಲಕ್ಷ ರೂಪಾಯಿ ಇದೆ. ನಾವು ಇದಕ್ಕಾಗಿ ಆರ್ಥಿಕ ಅನುದಾನಕ್ಕೆ ಕೇಳಿರುತ್ತೇವೆ, ಆದರೆ ಅದಕ್ಕೆ ಬಾಡಿಗೆದಾರರನ್ನು ಬಿಡಿಸುವ ಅವಶ್ಯಕತೆ ಇದೆ. ನಾವು ಆರ್ಥಿಕ ಅನುದಾನಕ್ಕಾಗಿ ಸ್ಟೇಟ್ ಬ್ಯಾಂಕ್ ಆಫ ಇಂಡಿಯಾ ಹಾಗೂ ಕ್ಯಾನರಾ ಬ್ಯಾಂಕನ್ನು ಸಂಪರ್ಕಿಸಿರುತ್ತೇವೆ. ಅವರೂ ಸಹ ಈ ರೀತಿ ಸಾಲವನ್ನು ಮಂಜೂರಾತಿ ಮಾಡಲು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ. ಎಲ್ಲರನ್ನೂ ಬಾಡಿಗೆಯಿಂದ ಬಿಡಿಸಿದ ಮೇಲೆ ಅರ್ಜಿ ಆಸ್ತಿಯ ವಿಸ್ತೀರ್ಣ 11,000 ಚದರ ಮೀಟರ್ ಅಂದಾಜು ಆಗಬಹುದು. ಯಾವುದಾದರೂ ಕಚ್ಚಾ ನಕ್ಷೆಯನ್ನು ತಯಾರಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸೋನೋ ಆರ್ಕಿಟೆಕ್ಸ ಅವರು ಪ್ಲಾನ್ ತಯಾರಿಸಿದ್ದಾರೆ ಎಂದು ಹೇಳುತ್ತಾರೆ. ಕಚ್ಚಾ ನಕ್ಷೆಯನ್ನು ನಾವು ಅನೇಕ ಪ್ರಕರಣಗಳಲ್ಲಿ ಹಾಜರು ಪಡಿಸಿದ್ದೆವು.

ಪಶ್ಚಿಮಕ್ಕೆ ಬಿ ಆರ್ ಟಿ ಎಸ ನವರು ಅರ್ಜಿ ಆಸ್ತಿಯನ್ನು ರಸ್ತೆ ಮಾಡಲು ತೆಗೆದುಕೊಂಡಿರುತ್ತಾರೆ. ಬಿ ಆರ್ ಟಿ ಎಸ್ ನವರು ಪೂರ್ವಕ್ಕೆ ಅಧಿಕ ಆಸ್ತಿಯನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಎಲ್ಲಾ ಕಡೆ ಸಾರ್ವಜನಿಕ ರಸ್ತೆ ಇರುವುದರಿಂದ ನಾವು ಅರ್ಜಿ ಆಸ್ತಿಯಲ್ಲಿ ಸಮುದಾಯ ಭವನವನ್ನು ಕಟ್ಟಿಸಿ ಸೆಟ್ ಬ್ಯಾಕ ಎರಿಯಾ ಬಿಡಲು ಸಾಧ್ಯವಿಲ್ಲ ಎಂದರೆ ಸರಿ.ಅಲ್ಲಿ ಪಾರ್ಕಿಂಗ್ ಮತ್ತು ಸೆಟ್ ಬ್ಯಾಕ್‌ಗೆ ಅಲ್ಲಿ ಸ್ಥಳ ಇಲ್ಲ ಎಂದರೆ ಸಾಕ್ಷಿಯು ನಾವು ಅಂಗಡಿಗಳಿಗೆ ಬಾಡಿಗೆ ಕೊಟ್ಟಿದ್ದೇವೆ ಅದನ್ನು ನಾವು ಪಾರ್ಕಿಂಗ್ ಗೊಸ್ಕರ ಮೀಸಲು ಇಡುತ್ತೇವೆ ಎಂದು ಹೇಳುತ್ತಾರೆ. ನನಗೆ ಎಷ್ಟು ಜಾಗವನ್ನು ಸಮುದಾಯ ಭವನಕ್ಕೆ ಮತ್ತು ಅಂಗಡಿಗಳಿಗೆ ತೆಗೆದಿರಸಲಾಗಿದೆ ಎಂದು ನನಗೆ ನೆನಪಿಲ್ಲ. ನಮ್ಮದು ಯಾವುದೇ ಸಮುದಾಯ ಭವನವನ್ನು ಯೋಜನೆ ಇಲ್ಲ ಎಂದರೆ ಸರಿಯಲ್ಲ. ಪಶ್ಚಿಮಕ್ಕೆರಸ್ತೆ

ಎಚ್ ಆರ್ ಸಿ 1/2018

ಪಿಡಬ್ಲ್ಯು-1

ಇರುವ ಕಾರಣ ನಾನು ಅಲ್ಲಿ ಸಮುದಾಯ ಭವನವನ್ನು ಕಟ್ಟಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಕಾರ್ಪೋರೇಶನ್ ಅವರು ಅದಕ್ಕೆ ನನಗೆ ಮಂಜೂರಾತಿ ನೀಡುವುದಿಲ್ಲ ಎಂದರೆ ಸರಿಯಲ್ಲ. ನಾನು ಸಮುದಾಯ ಭವನವನ್ನು ಕಾಂಪ್ಲೆಕ್ಸಗಳನ್ನುಕಟ್ಟಲು ಯಾವುದೇ ಆರ್ಥಿಕ ಸಂಸ್ಥೆಗಳಿಗೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ.

ಎದುರುಗಾರರು ಅರ್ಜಿಯ ಆಸ್ತಿಯಲ್ಲಿ ಸೈಕಲ್ ರಿಪೇರಿ ಅಂಗಡಿ ನಡೆಸುತ್ತಿದ್ದಾರೆ ಎಂದರೆ ಸರಿ. ಅದು ಕೇವಲ 30 ಸ್ಕೇಯರ್ ಫೀಟ್ ಜಾಗ ಎಂದರೆ ಸಾಕ್ಷಿಯು 10X6 ಇದೆ ಎಂದು ಹೇಳುತ್ತಾರೆ. ಈ ಅಂಗಡಿಗಳು ಇರುವ ಪೂರ್ವ ಜಾಗದಲ್ಲಿ ಮನೆಗಳು ಇವೆ ಎಂದರೆ ಸರಿ. ನಾನು ಅವರ ಮೇಲೆ ಎಚ್ ಆರ್ ಸಿ ಅರ್ಜಿ ಹಾಕಿಲ್ಲ ಎಂದರೆ ನನಗೆ ನೆನಪಿಲ್ಲ. ನಾನು ಅರ್ಜಿ ಆಸ್ತಿಗೆ ಹಾಗೂ ಇತರೆ ಆಸ್ತಿಗಳಿಗೆ ಆಗಾಗ ಬೇಟಿ ನೀಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ಬಾಡಿಗೆದಾರರ ವೈಯುಕ್ತಿಕ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ನನ್ನದು ಯಾವುದೇ ಸಮುದಾಯ ಭವನವನ್ನು ಕಟ್ಟುವ ಯೋಜನೆ ಇಲ್ಲದಿದ್ದರೂ ಮುಗ್ಧ ಬಾಡಿಗೆದಾರರನ್ನು ಬಿಡಿಸಿ ಅರ್ಜಿ ಆಸ್ತಿಯನ್ನು ಮಾರುವ ಉದ್ದೇಶವನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ.

ಎದುರುಗಾರರ ತಂದೆ ಅರ್ಜಿ ಆಸ್ತಿಯಲ್ಲಿ ಸೈಕಲ್ ಅಂಗಡಿ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಮಾವನವರಿಗೆ ಎದುರುಗಾರರ ತಂದೆ ಪರಿಚಯ ಇದೆ ಎಂದು ಹೇಳುತ್ತಾರೆ. ಎದುರುಗಾರರ ಹೆಸರು ಮೊಟಗಿ. ಅವರ ಇಡೀ ಕುಟುಂಬ ಸೈಕಲ್ ಅಂಗಡಿಯ ಮೇಲೆ ನಿರ್ಭರವಾಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ಅವರು ಸೈಕಲ್ ರೀಪೇರಿ ಅಂಗಡಿ ನಡೆಸುತ್ತಾರೆ ನನಗೆ ಅಷ್ಟೇ ಗೊತ್ತು. ಎದುರುಗಾರರಿಗೆ ಅರ್ಜಿ ಆಸ್ತಿಯನ್ನು ಬಿಟ್ಟು ಬೇರೆ ಕಡೆ ಸೈಕಲ್ ರೀಪೇರಿ ಅಂಗಡಿಗೆ ಅವಕಾಶ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಮೂರನೇ ಅಧಿಕ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಧಾರವಾಡ.